# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1073 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 18-12-2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನಲ್ಲಿ ಸ.ನಂ. 112 ರ ಪೈಕಿ (568) 2-20ಎ/ಗುಂಟೆ ಜಮೀನಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಕ್ಕೆ ವಂಚನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ; | ಬಂದಿದೆ.<br><br>ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನಲ್ಲಿ ಸ.ನಂ.112ರ ಪೈಕಿ (568) 2.20 ಎ/ಗುಂಟೆ ಗೋಮಾಳ ಜಮೀನಿಗೆ ಸಂಬಂಧಿಸಿದಂತೆ ಬಸ್ತಾ ಹಾಗೂ ಆಕಾರಬಂದ್ ಪರಿಶೀಲಿಸಿ ಸ.ನಂ.568ರ ಪೋಡಿ ಪ್ರತಿ ನಕಲು ಲಭ್ಯವಿದ್ದು, ಆಕಾರ್‌ಬಂದ್ ಹಾಗೂ ಕೆ.ಡಿ.ಟಿ ಲಭ್ಯವಿರುವುದಿಲ್ಲ ಹಾಗೂ ತಾಂತ್ರಿಕ ನ್ಯೂನ್ಯತೆಯಿಂದ ಕೂಡಿರುತ್ತದೆ ಎಂದು ಭೂದಾಖಲೆಗಳ ಸಹಾಯಕ ನಿರ್ದೇಶಕರು, ಮಾಲೂರು ತಾಲ್ಲೂಕು ಇವರಿಂದ ದಿನಾಂಕ:03.10.2024ರ ಹಿಂಬರಹ ಪತ್ರದಲ್ಲಿ ಅರ್ಜಿದಾರರಿಗೆ ಮಾಹಿತಿ ನೀಡಲಾಗಿದೆ.<br><br>ಉಪ ವಿಭಾಗಾಧಿಕಾರಿ, ಕೋಲಾರ ಉಪ ವಿಭಾಗ ಮತ್ತು ತಹಶೀಲ್ದಾರ್, ಮಾಲೂರು ತಾಲ್ಲೂಕು ಇವರು ಸದರಿ ಸರ್ವೆ ನಂ.112ರ ಹೊಸ ಸರ್ವೆ ನಂಬರ್ 568ರ ವಿಸ್ತೀರ್ಣ 2.20ಎ/ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಅಕ್ರಮ ದಾಖಲೆಗಳು ಆಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದಾಗಿ ಜಿಲ್ಲಾಧಿಕಾರಿ, ಕೋಲಾರ ಇವರಿಗೆ ವರದಿ ಸಲ್ಲಿಸಿದ್ದು, ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| ಆ) | ಮಾಲೂರು ತಾಲ್ಲೂಕು, ಮಾರಸಂದ್ರ ಗ್ರಾಮದ ಸ.ನಂ. 10ರ ಪೈಕಿ 160 ರಲ್ಲಿ 4-00 ಎಕರೆ ಮತ್ತು 161 ರಲ್ಲಿ 2.22 ಎಕರೆ ಖಾಲಿ ಇದ್ದು, ಸರ್ಕಾರಿ ಜಮೀನಿಗೆ ದುರಸ್ತಿಪಡಿಸಿ ಸರ್ಕಾರಕ್ಕೆ ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ; | ಮಾರಸಂದ್ರ ಗ್ರಾಮದ ಸ.ನಂ. 10 ರ ಪೈಕಿ ಸರ್ಕಾರಿ ಜಮೀನಿಗೆ ದುರಸ್ತಿ ಪಡಿಸಿ ರೀ.ಸ.ನಂ 160 ರಲ್ಲಿ 4-00 ಎಕರೆ ಮತ್ತು 161 ರಲ್ಲಿ 2 ಎಕರೆ 22 ಗುಂಟೆ ಯನ್ನು 1998 ರಲ್ಲಿ ದುರಸ್ತಿ ಪಡಿಸಲಾಗಿದ್ದು, ನಂತರ 2009ರಲ್ಲಿ ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ ರವರ ನ್ಯಾಯಾಲಯದಲ್ಲಿ ಸಿವಿಲ್ ನ್ಯಾಯಾಲಯದ ಆದೇಶಕ್ಕೆ ಒಳಪಟ್ಟು ದುರಸ್ತಿ ರದ್ದುಪಡಿಸಿ, ಮರು ದುರಸ್ತಿಪಡಿಸಲು ಆದೇಶಿಸಲಾಗಿದೆ.<br><br>ನಂತರ ಘನ ಸಿವಿಲ್ ನ್ಯಾಯಾಲಯದ ಪ್ರಕರಣ ಸಂಖ್ಯೆ: ಓ.ಎಸ್.ನಂ.95/2009ರಲ್ಲಿ ವಾದಿ ಮತ್ತು ಪ್ರತಿ ವಾದಿಯವರ ರಾಜಿಯಿಂದ ಸ್ಥಿರೀಕೃತ ನೋಂದಣಿ ಪತ್ರ (ಡೀಡ್ ಆಫ್ ಕನ್ನರ್ ಮೇಷನ್) ಆಗಿ ಪ್ರಕರಣ ಮುಕ್ತಾಯಗೊಂಡಿರುತ್ತದೆ. ಸದರಿ ಘನ ಸಿವಿಲ್ ನ್ಯಾಯಾಲಯದ ಆದೇಶದಂತೆ ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ ರವರು ದಿನಾಂಕ:-09-09-2020 ರಂದು ಈ ಹೊಸ ರೀಸನಂ 160 & 161 ರ ದುರಸ್ತಿಯನ್ನು ಮುಂದುವರೆಸಿ ಆದೇಶಿಸಿರುತ್ತಾರೆ. |

| | | |
|---|---|---|
| ಇ) | ಮಾಲೂರು ತಾಲ್ಲೂಕು ನಿದರಮಂಗಲ ಸ.ನಂ. 155ರ ಪೈಕಿ ಸುಮಾರು 12-00 ಎಕರೆ ಜಮೀನಿಗೆ ಸರ್ಕಾರಿ ಸುತ್ತೋಲೆಗಳನ್ನು ಬದಿಗೊತ್ತಿ ದುರಸ್ತಿ ಕ್ರಮ ಜರುಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣವಾದ ಮಾಹಿತಿ ನೀಡುವುದು) | ಮಾಲೂರು ತಾಲ್ಲೂಕು ನಿದರಮಂಗಲ ಗ್ರಾಮದ ಸ.ನಂ. 155 ರ ಪೈಕಿ ಸುಮಾರು 12.00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಪೋಡಿ ದುರಸ್ತಿ ಆಗಿರುವುದಿಲ್ಲ. |
| ಈ) | ಮಾಲೂರು ತಾಲ್ಲೂಕು, ತೋರ್ನಹಳ್ಳಿ ಅಗ್ರಹಾರ ಸ. ನಂ. 21ರ ಪೈಕಿ ಖಾಲಿ ಇದ್ದ ಸುಮಾರು 7-00 ಎಕರೆ ಜಮೀನಿಗೆ ಡಿ.ಡಿ.ಎಲ್.ಆರ್. ಕಛೇರಿಯಲ್ಲಿ ಆದೇಶವನ್ನು ಮಾಡಿ ಭೂಗಳ್ಳರ ಪಾಲಾಗುವಂತೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣವಾದ ಮಾಹಿತಿ ನೀಡುವುದು) | ಮಾಲೂರು ತಾಲ್ಲೂಕು, ತೋರ್ನಹಳ್ಳಿ ಅಗ್ರಹಾರ ಸ.ನಂ. 21 ರ ಪೈಕಿ ಖಾಲಿ ಇದ್ದ ಸುಮಾರು 7-00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಭೂದಾಖಲೆಗಳ ಉಪ ನಿರ್ದೇಶಕರು ಕೋಲಾರ ಜಿಲ್ಲೆ ಇವರ ಕಛೇರಿಯಲ್ಲಿ ಆದೇಶ ಮಾಡಿರುವುದಿಲ್ಲ. |
| ಉ) | ಈ ಎಲ್ಲಾ ಪ್ರಕರಣಗಳಲ್ಲಿ ಹಾಗೂ ಇನ್ನೂ ಸಾಕಷ್ಟು ಪ್ರಕರಣಗಳಲ್ಲಿ ಈ ಹಿಂದೆ ಕೋಲಾರ ಡಿ.ಡಿ.ಎಲ್.ಆರ್. ರವರ ಕಛೇರಿಯಲ್ಲಿ ಭೂಮಾಪಕರಾಗಿ ಮತ್ತು ಪರ್ಯಾವೇಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದ ನೌಕರರ ಮೇಲೆ ಹಾಗೂ ಪ್ರಸ್ತುತ ಎ.ಡಿ.ಎಲ್.ಆರ್. ಕೋಲಾರ ರವರು ಕಛೇರಿಯಲ್ಲಿ ಪರ್ಯಾವೇಕ್ಷಕರಾಗಿ ಕೆಲಸ ನಿರ್ವಹಿಸುತ್ತಿರುವವರ ಮೇಲೆ ಸುಮಾರು ದೂರು ಅರ್ಜಿಗಳು ಬಂದಿದ್ದರೂ ಸಹ ಸಂಬಂಧಪಟ್ಟವರ ಮೇಲೆ ಯಾವುದೇ ಕಾನೂನು ಕ್ರಮ ಕೈಗೊಳ್ಳದೇ ಇರಲು ಕಾರಣವೇನು? (ಸಂಪೂರ್ಣವಾದ ಮಾಹಿತಿ ನೀಡುವುದು) | ಸದರಿ ಪ್ರಕರಣಗಳು ಸೇರಿದಂತೆ ಇನ್ನು ಅನೇಕ ಪ್ರಕರಣಗಳಲ್ಲಿ ಈ ಹಿಂದೆ ಭೂದಾಖಲೆಗಳ ಉಪ ನಿರ್ದೇಶಕರು ಕೋಲಾರ ಜಿಲ್ಲೆ ಇವರ ಕಛೇರಿಯಲ್ಲಿ ಭೂಮಾಪಕರಾಗಿ ಮತ್ತು ಪರ್ಯಾವೇಕ್ಷಕರಾಗಿ ಕೆಲಸ ನಿರ್ವಹಿಸಿದ್ದ ಹಾಗೂ ಪ್ರಸ್ತುತ ಭೂದಾಖಲೆಗಳ ಸಹಾಯಕ ನಿರ್ದೇಶಕರು ಕೋಲಾರ ತಾಲ್ಲೂಕು ಕಛೇರಿಯಲ್ಲಿ ಪರ್ಯಾವೇಕ್ಷಕರಾಗಿ ಕೆಲಸ ನಿರ್ವಹಿಸುತ್ತಿರುವ ಶ್ರೀ ಜಿ. ಸುರೇಶ್‌ಬಾಬು, ಪರ್ಯಾವೇಕ್ಷಕರು ಇವರ ವಿರುದ್ಧ ದೂರು ಸ್ವೀಕೃತವಾದ ಮೇರೆಗೆ, ಸದರಿ ದೂರು ಅರ್ಜಿ ಕುರಿತು ಭೂದಾಖಲೆಗಳ ಉಪ ನಿರ್ದೇಶಕರು, ತುಮಕೂರು ಜಿಲ್ಲೆ ಇವರಿಂದ ವಿಚಾರಣೆ ವರದಿ ಪಡೆದು, ಸಾರ್ವಜನಿಕರ ಕೆಲಸಗಳಲ್ಲಿ ಎಚ್ಚರಿಕೆಯಿಂದ ಕೆಲಸ ನಿರ್ವಹಿಸುವಂತೆ ಸೂಚಿಸಿ ಎಚ್ಚರಿಕೆ ನೋಟೀಸ್ ನೀಡಲಾಗಿರುತ್ತದೆ. |

**ಸಂಖ್ಯೆ: ಕಂಇ 208 ಎಸ್‌ಎಸ್‌ಸಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು